19)	ಕೇಂದ್ರ ಸರ್ಕಾರದ ಸಂಸದೀಯ ವ್ಯವಹಾರ ಮಂತ್ರಿಗಳು	1"
20)	ಕರ್ನಾಟಕ ರಾಜ್ಯದ ಪಶುಸಂಗೋಪನಾ ಮಂತ್ರಿಗಳು	1"
	ಒಟ್ಟು	83 ಬಾರಿ

ಆ) ರಾಜ್ಯದ ಹೆಲಿಕಾಪ್ಟರ್ ದುರಸ್ತಿಯಲ್ಲಿದ್ದಾಗ ಹಾರಾಟಕ್ಕೆ ಲಭ್ಯವಿಲ್ಲದಿದ್ದಂತಹ ತುರ್ತು ಸಂದರ್ಭಗಳಲ್ಲಿ ಖಾಸಗಿಯವರ ಹೆಲಿಕಾಪ್ಟರ್‌ನ್ನು 6 ಬಾರಿ ಬಾಡಿಗೆಗೆ ಪಡೆಯಲಾಗಿದೆ. ಅದಕ್ಕೆ ನೀಡಲಾದ ಬಾಡಿಗೆ ರೂ. 4,03,849–00.

ಇಂಧನದ ವೆಚ್ಚ – 47,818–00 ರೂ.ಗಳು. ರಾಜ್ಯದ ಹೆಲಿಕಾಪ್ಟರ್ ದುರಸ್ತಿಯಲ್ಲಿದ್ದುದರಿಂದ ಖಾಸಗಿಯವರ ಹೆಲಿಕಾಪ್ಟರ್‌ನ್ನು ಬಳಸುವ ಅವಶ್ಯಕತೆ ಇತ್ತು.

ಇ) ರಾಜ್ಯ ಸರ್ಕಾರದ ಅಧಿಕಾರಿಗಳು 4 ಬಾರಿ ಉಪಯೋಗಿಸಿರುತ್ತಾರೆ. ವಿವರಗಳನ್ನು ಕೆಳಗೆ ನಮೂದಿಸಲಾಗಿದೆ.

ಅ) ಪೋಲೀಸ್ ಇಲಾಖೆ – 3 ಬಾರಿ

ಆ) ಮುಖ್ಯ ಕಾರ್ಯದರ್ಶಿಗಳು – 1 ಬಾರಿ.

ಮಲಪ್ರಭಾ ನದಿಗೆ ಅಡ್ಡಲಾಗಿ ಏತ ನೀರಾವರಿ ಯೋಜನೆ

1537 (2111): ಶ್ರೀ ಎಂ.ಕೆ. ಪಟ್ಟಣಶೆಟ್ಟಿ (ಬಾದಾಮಿ):–

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕನಸಬಿ ಗ್ರಮಾದ ಹತ್ತಿರ ಮಲಪ್ರಭಾ ನದಿಗೆ ಅಡ್ಡಲಾಗಿ ಏತ ನೀರಾವರಿ ಮಾಡುವ ಯೋಜನೆ ಮಂಜೂರಾಗಿದೆಯೇ;

ಆ) ಆಗಿದ್ದರೆ ಯಾವಾಗ ಮಂಜೂರಾಗಿದೆ;

ಇ) ಕೆಲಸದ ಪ್ರಗತಿಯ ವಿವರಗಳನ್ನು ಒದಗಿಸುವುದು ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಹೌದು.

ಆ) ಈ ಯೋಜನೆಯು ನಬಾರ್ಡ್‌ದಿಂದ 3–7–92 ಪತ್ರ ಸಂ:ಎನ್‌ಬಿ (ಬಿಃ ಕೆಎಲ್‌ಸಿ 29:91–92ರಲ್ಲಿ ಮಂಜೂರಾಗಿರುತ್ತದೆ.

ಇ) ಯೋಜನೆಯ ಕಟ್ಟಡ ಭಾಗದ ರೂ.2.696ಲಕ್ಷ ವೆಚ್ಚದ ಕಾಮಗಾರಿಯನ್ನು ಮುಗಿಸಲಾಗಿದ್ದು ಇನ್ನುಳಿದ ಜಾಕ್‌ವೆಲ್, ಯಂತ್ರಗಾರ, ಇನಟೇಕ್ ವೆಲ್, ಇನಟೇಕ್ ಪೈಪ್ ಲೈನ್, ರೈಸಿಂಗ್ ಮೇನ್ ಮತ್ತು ಡೆಲಿವರಿ ಚೇಂಬರ್ ಕಾಮಗಾರಿಗಳನ್ನು ಕೈಗೊಳ್ಳಲು ಟೆಂಡರ್ ಕರೆಯಲಾಗಿದೆ. ಯೋಜನೆಯ ಯಂತ್ರೋಪಕರಣಗಳನ್ನು ಪೂರೈಸಿ ಅಳವಡಿಸಲು ಎನ್.ಜಿ.ಇ.ಎಫ್ ಬೆಂಗಳೂರು ಇವರಿಗೆ ವಹಿಸಲಾಗಿದೆ. ಸದರಿ ಸಂಸ್ಥೆಯವರು ಕೆಲವೊಂದು ಭಾಗದ ಯಂತ್ರೋಪಕರಣಗಳನ್ನು ಈಗಾಗಲೇ ಪೂರೈಸಿದ್ದಾರೆ.